**ದಿನಾಂಕ 27.02.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಬಿ.ಎಂ. ವಕೀಲರಿಂದಃ**

1. ನನ್ನ ತಂದೆಯ ಹೆಸರು ಆರ್.ರಂಗಪ್ಪ ಎಂದರೆ ಸರಿ. ನನ್ನ ತಾತನ ಹೆಸರು ರಂಗಣ್ಣನವರ ರಂಗಪ್ಪ ಎಂದರೆ ಸರಿ. ನನ್ನ ತಾತನನ್ನು ಜೊಲ್ಲು ರಂಗಣ್ಣ ಎಂದು ಕರೆಯುತ್ತಾರೆ ಎಂದರೆ ಸರಿ. ಪ್ರತಿವಾದಿ 1 ಮತ್ತು 2 ರವರ ತಂದೆಯ ಹೆಸರು ರಂಗಪ್ಪ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಯ ತಾತನ ಹೆಸರು ಕುಂಟಪ್ಪನವರ ರಂಗಪ್ಪ ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಮತ್ತು ನಾವು ಒಂದೇ ಊರಿನಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ನನ್ನ ತಂದೆಯವರು 1 ಮತ್ತು 2 ನೇ ಪ್ರತಿವಾದಿಗಳ ತಂದೆಯ ಬಳಿ 1959 ರ ಮುಂಚೆಯೇ ಸಾಲವನ್ನು ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಸಾಲವನ್ನು ನನ್ನ ತಂದೆಯವರು ತೀರುವಳಿ ಮಾಡಿರಲಿಲ್ಲ ಎಂದರೆ ಸರಿಯಲ್ಲ.

2. **ರೂ. 629.20/-** ರೂಪಾಯಿಗಳ ಸಾಲದ ವಸೂಲಿಗಾಗಿ 1 ಮತ್ತು 2 ನೇ ಪ್ರತಿವಾದಿಗಳ ತಂದೆ ಮಧುಗಿರಿಯ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 589/1959 ರಂತೆ ದಾವೆಯನ್ನು ದಾಖಲು ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ತಂದೆಗೆ ಯಾವುದೇ ನೋಟೀಸು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ನೋಟೀಸು ನನ್ನ ತಂದೆಗೆ ಜಾರಿಯಾಗಿದ್ದರೂ ಸಹ ನನ್ನ ತಂದೆ ನ್ಯಾಯಾಲಯಕ್ಕೆ ಹಾಜರಾಗದೇ ಇರುವ ಕಾರಣ ದಾವೆ ಡಿಕ್ರಿಯಾಗಿತ್ತು ಎಂದರೆ ಸರಿಯಲ್ಲ. ತದನಂತರ 1 ಮತ್ತು 2 ನೇ ಪ್ರತಿವಾದಿಗಳ ತಂದೆ ಮಧುಗಿರಿ ನ್ಯಾಯಾಲಯದಲ್ಲಿ ವಸೂಲಾತಿಗಾಗಿ Ex No. 128/1960 ರಂತೆ ಕೇಸು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಅದರಲ್ಲಿ ದಾವಾ ಸ್ವತ್ತು ಜಪ್ತಿಯಾಗಿ ಮಾರಾಟವಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೈಕಿ 4 ಎಕರೆಯನ್ನು ಪ್ರತಿವಾದಿ 1 ಮತ್ತು 2 ರವರ ತಂದೆಗೆ ಹರಾಜಿನ ಮುಖಾಂತರ ಮಾರಾಟ ಮಾಡಿ ಸೇಲ್ ಸರ್ಟಿಫಿಕೇಟ್ ಕೊಡಲಾಗಿತ್ತು ಎಂದರೆ ಸರಿಯಲ್ಲ.

3. ಸರ್ವೆ ನಂ. 7/2 ರಲ್ಲಿ ಉಳಿದ 1 ಎಕರೆ 8 ಗುಂಟೆಯ ಜಮೀನನ್ನು ನನ್ನ ತಂದೆ 30.12.1961 ರಲ್ಲಿ 1 ಮತ್ತು 2 ನೇ ಪ್ರತಿವಾದಿಗಳ ತಂದೆಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಅದರಂತೆ ಸಂಪೂರ್ಣ ಜಮೀನು ಎಂ.ಆರ್. 6/2001-02 ರಂತೆ 1 ಮತ್ತು 2 ನೇ ಪ್ರತಿವಾದಿಗಳ ತಂದೆಯ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿಯಲ್ಲ. ಅದರಂತೆ 1 ಮತ್ತು 2 ನೇ ಪ್ರತಿವಾದಿಗಳ ತಂದೆಯವರೇ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ದಿನಾಂಕ 02.06.2003 ರಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ದ್ವಾರಲುಕುಂಟೆಯ ಪಾತಮ್ಮ ಕೋಂ ನರಸಿಂಹಪ್ಪನವರಿಗೆ 5 ಎಕರೆ 8 ಗುಂಟೆ ಪೈಕಿ 2 ಎಕರೆ 24 ಗುಂಟೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಎಂ.ಆರ್.01/2003-04 ರಂತೆ ಪಾತಮ್ಮನವರ ಹೆಸರಿಗೆ ಖಾತೆಯಾಗಿದ್ದು, ಅದರಲ್ಲಿ ಅವರು ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1999 ರಲ್ಲಿ ನನ್ನ ತಂದೆ ತೀರಿಕೊಂಡಿದ್ದರು, 2003 ರಲ್ಲಿ ಕ್ರಯಪತ್ರವನ್ನು ಯಾರು ಮಾಡಿಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ.

4. ನಂತರ ಪಾತಮ್ಮನವರು 4 ನೇ ಪ್ರತಿವಾದಿಗೆ ಸೇಲ್ ಅಗ್ರಿಮೆಂಟ್ ಮುಖಾಂತರ ಖಾತೆ ಪಹಣಿಯನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸೇಲ್ ಅಗ್ರಿಮೆಂಟ್ ನಂತೆ ಪಾತಮ್ಮನವರು ನಡೆದುಕೊಳ್ಳದೇ ಇರುವ ಕಾರಣ 4 ನೇ ಪ್ರತಿವಾದಿಯು ಶಿರಾ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 399/2011 ರಂತೆ ದಾವೆಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯು ಲೋಕ್ ಅದಲತ್ ನಲ್ಲಿ ರಾಜಿ ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ರಾಜಿ ಮಾಡಿಕೊಂಡ ನಂತರ 4 ನೇ ಪ್ರತಿವಾದಿಗೆ ಕ್ರಯ ಪತ್ರವನ್ನು ಮಾಡಿಕೊಡದೇ ಇರುವ ಕಾರಣ EX No. 22/2013 ರಂತೆ ಕೇಸು ತಂದಿದ್ದರು ಎಂದರೆ ಸರಿಯಲ್ಲ. ಸದರಿ ಕೇಸಿನಲ್ಲಿ ಕೋರ್ಟ್ ಕಮಿಷನರ್ ಮುಖಾಂತರ ಕ್ರಯ ಪತ್ರವನ್ನು 2 ಎಕರೆ 24 ಗುಂಟೆಗೆ ಸಂಬಂಧಿಸಿದಂತೆ ಮಾಡಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. 5 ಎಕರೆ 8 ಗುಂಟೆ ಪೈಕಿ 2 ಎಕರೆ 24 ಗುಂಟೆಯಲ್ಲಿ 4 ನೇ ಪ್ರತಿವಾದಿಯು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

5. ನನಗೆ ಈಗ 64 ವರ್ಷ ವಯಸ್ಸು. ನಮ್ಮ ತಂದೆ ದಾವಾ ಜಮೀನಿಗೆ ಸಂಬಂಧಿಸಿದಂತೆ 1 ಮತ್ತು 2 ನೇ ಪ್ರತಿವಾದಿಗಳ ತಂದೆಗೆ 1959-60 ರಲ್ಲಿ ಕ್ರಯ ಮಾಡಿಕೊಟ್ಟಿದ್ದರೂ ಸಹ ನಾನು ದಾವಾ ಸ್ವತ್ತಿನಲ್ಲಿ ಅನುಭವದಲ್ಲಿ ಇದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ನನ್ನ ತಂದೆ ಮಾರಾಟ ಮಾಡುವ ಕಾಲಕ್ಕೆ ನಾನು ಹುಟ್ಟಿರಲಿಲ್ಲ ಎಂದರೆ ಸಾಕ್ಷಿಯು ನಮ್ಮ ತಂದೆಯು ಮಾರಾಟ ಮಾಡಿಲ್ಲ ಹಾಗೂ ನಾನು 1960 ನೇ ಸಾಲಿನಲ್ಲಿ ಹುಟ್ಟಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲದೇ ಇದ್ದರೂ ಸಹ ಪ್ರತಿವಾದಿಗಳ ವಿರುದ್ಧ ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ನನ್ನ ತಂದೆಯ ಹೆಸರು ಮತ್ತು ಪ್ರತಿವಾದಿಗಳ ತಂದೆಯ ಹೆಸರು ಒಂದೇ ಇದೆ ಎಂದರೆ ಸಾಕ್ಷಿಯು ಕಾನೂನು ಬಾಹಿರವಾಗಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಅದೇ ರೀತಿ ನನ್ನ ತಾತನ ಹೆಸರು ಮತ್ತು ಪ್ರತಿವಾದಿಗಳ ತಾತನ ಹೆಸರು ರಂಗಪ್ಪ ಎಂದು ಒಂದೇ ಇದೆ ಎಂದರೆ ಸಾಕ್ಷಿಯು ಕಾನೂನು ಬಾಹಿರವಾಗಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**